ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-03**

**ಸಂಖ್ಯೆ:ಎ4/1038/ವಾ.ದು/42/2021-22** **ದಿನಾಂಕ:12.09.2022**

## "ಬಹಿರಂಗ ಹರಾಜು ಪ್ರಕಟಣೆ"

**ವಿಷಯ:-** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು.

**ಉಲ್ಲೇಖ;-** ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಯಶವಂತಪುರ, ಬೆಂಗಳೂರು ಉತ್ತರ ಇವರ ಪತ್ರ ಸಂಖ್ಯೆ:ಪ್ರಾ.ಸಾ.ಅ/ಬೆಂ(ಉ)/ಸಾರಿಗೇತರ/21-22 ದಿನಾಂಕ.29.01.2022

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-560003 ಈ ಕಛೇರಿಯ ಕೆ.ಎ.04.ಜಿ.1038 ಮತ್ತು ಕೆ.ಎ.04.ಜಿ.1039 ಎರಡು ಟಾಟಾ ಸುಮೋ ಗ್ರಾಂಡಿ ವಾಹನಗಳು ಪದೇ-ಪದೇ ದುರಸ್ಥಿಗೆ ಬರುತ್ತಿರುವುದರಿಂದ ಸದರಿ ವಾಹನಗಳ ಪ್ರಸ್ತುತ ಸ್ಥಿತಿಗತಿ ಮತ್ತು ಪ್ರಸಕ್ತ ಮಾರುಕಟ್ಟೆ ಬೆಲೆಯನ್ವಯ ಅಂದಾಜು ಮೌಲ್ಯವನ್ನು ನಿಗದಿಪಡಿಸಿ, ಬಹಿರಂಗ ಹರಾಜು ಮಾಡುವ ಮೂಲಕ ವಿಲೇವಾರಿ ಮಾಡುವ ಸಂಬಂಧ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಯಶವಂತಪುರ, ಬೆಂಗಳೂರು ಉತ್ತರ ವಲಯ ಇವರಿಂದ ಉಲ್ಲೇಖಿತದಂತೆ ವರದಿ ಪಡೆಯಲಾಗಿದ್ದು, ಈ ಹಿನ್ನೆಲೆಯಲ್ಲಿ ಮೇಲಿನ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಿದ್ದು, ಸದರಿ ಎರಡು ವಾಹನಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಾಹನದ ನೋಂದಣಿ ಸಂಖ್ಯೆ | **ಕೆ.ಎ.04.ಜಿ.1038** | **ಕೆ.ಎ.04.ಜಿ.1039** |
|---|---|---|---|
| 01 | ಮಾದರಿ/ತಯಾರಕರ ಹೆಸರು | ಟಾಟಾ ಮೋಟರ್ಸ್ | ಟಾಟಾ ಮೋಟರ್ಸ್ |
| 02 | ನೋಂದಣಿಯಾದ ವರ್ಷ | 2011 | 2011 |
| 03 | ಇಂಜಿನ್ ಸಂಖ್ಯೆ | 22LDICOR10NYYJ23573 | 22LDICOR10NYYJ24090 |
| 04 | ಚಾಸಿ ಸಂಖ್ಯೆ | MAT465314B9N34326 | MAT465314B9N34462 |
| 05 | ಸಿಸಿ | 2179 | 2179 |
| 06 | ತೂಕ | 1940 | 1940 |
| 07 | ಸಿಲಿಂಡರ್ | 04 | 04 |
| 08 | ಇಂಧನ | ಡೀಸೆಲ್ | ಡೀಸೆಲ್ |
| 09 | ಕ್ರಮಿಸಿದ ದೂರ | 2,22,743 ಕಿ.ಮಿ | 1,83,456 ಕಿ.ಮಿ |

ಮೇಲ್ಕಂಡ ವಿವರಗಳ ಕವಚ ಹೊದಿಕೆ ಇರುವ ವಾಹನಗಳನ್ನು ದಿನಾಂಕ:22.09.2022ರಂದು ಅಪರಾಹ್ನ 3.00 ಗಂಟೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಆವರಣದಲ್ಲಿ ಸಾರ್ವಜನಿಕವಾಗಿ ಬಹಿರಂಗ ಹರಾಜು ಮಾಡಲಾಗುವುದು.

**ಷರತ್ತುಗಳು:-**

1. ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸಮಯದ ಮೂವತ್ತು ನಿಮಿಷಗಳಿಗೆ ಮುಂಚಿತವಾಗಿ ಹಾಜರಿದ್ದು, ನಿರ್ದೇಶಕರು, ಪರೀಕ್ಷೆಗಳು ಇವರ ಹೆಸರಿಗೆ ರೂ.5,000/-ಗಳ ಬ್ಯಾಂಕ್‌ಡಿ.ಡಿ ಪಡೆದು ಮಂಡಳಿಗೆ ಸಲ್ಲಿಸಿ, ತಮ್ಮ ಹೆಸರನ್ನು ನೋಂದಾಯಿಸತಕ್ಕದ್ದು. ಹರಾಜಿನಲ್ಲಿ ಹೆಚ್-1 ರಿಂದ ಹೆಚ್-3 ವರೆಗಿನ ಬಿಡ್‌ರ್‌ಗಳನ್ನು

2. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ವಾಹನ ಸಂಖ್ಯೆ.ಕೆ.ಎ.04.ಜಿ.1038 ವಾಹನಕ್ಕೆ ಸರ್ಕಾರಿ ಬಿಡ್ ರೂ;1,20,000/–ಮತ್ತು ವಾಹನ ಸಂಖ್ಯೆ.ಕೆ.ಎ.04.ಜಿ.1039 ವಾಹನಕ್ಕೆ ಸರ್ಕಾರಿ ಬಿಡ್ ರೂ;1,10,000/–ಗಿಂತ ಹೆಚ್ಚಿಗೆ ಬಿಡ್ ಮಾಡತಕ್ಕದ್ದು.

3. ಹರಾಜಿನಲ್ಲಿ ಹೆಚ್–1 ಆದವರು ಬಿಡ್ ಮೊಬಲಗಿನ ಶೇ.25ರ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸಿ(ಠೇವಣಿ ಹಣವನ್ನು ಹೊರತುಪಡಿಸಿ)ಉಳಿದ ಹಣವನ್ನು ಒಂದು ವಾರದೊಳಗೆ ಪಾವತಿಸುವುದು ತಪ್ಪಿದಲ್ಲಿ, ಹರಾಜು ಭಾಗವಹಿಸುವಿಕೆ ಸಂದರ್ಭದಲ್ಲಿ ಸಲ್ಲಿಸಿದ್ದ ರೂ.5,000/–ಗಳ ಬ್ಯಾಂಕ್ ಹುಂಡಿ ಹಾಗೂ ಶೇ.25ರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಹೆಚ್2 ಬಿಡ್ ರ್‌ಗೆ ಅವಕಾಶ ಕಲ್ಪಿಸಲಾಗುವುದು. ಮುಂದುವರೆದು ಹೆಚ್2 ಬಿಡ್‌ರ್ ಸಹ ಸದರಿ ಪ್ರಕ್ರಿಯೆಯಲ್ಲಿ ವೈಫಲ್ಯವಾದಲ್ಲಿ, ಹೆಚ್–3 ಬಿಡ್‌ರ್ ಗೆ ಅವಕಾಶ ಕಲ್ಪಿಸಲಾಗುವುದು.

4. ವಾಹನಗಳನ್ನು ಹರಾಜಿನಲ್ಲಿ ಪಡೆದವರು ವಾಹನದ(ಜಿ)ನೋಂದಣಿಯನ್ನು ಸ್ವಂತ ಖರ್ಚಿನಲ್ಲಿ ಬದಲಾವಣೆ ಮಾಡಿಕೊಂಡು ಮಂಡಳಿಗೆ ಸದರಿ ದಾಖಲೆಯ ಮಾಹಿತಿ ನೀಡಿದ ನಂತರ ವಾಹನಗಳನ್ನು ಹಸ್ತಾಂತರಿಸಲಾಗುವುದು.

5. ಸದರಿ ವಾಹನಗಳ (ಜಿ)ನೋಂದಣಿ ಬದಲಾಯಿಸದೆ ಯಾವುದೇ ಕಾರಣಕ್ಕೂ ರಸ್ತೆಯಲ್ಲಿ ಚಾಲನೆ ಮಾಡುವಂತಿಲ್ಲ.

6. ಹರಾಜನ್ನು ಯಾವುದೇ ಕಾರಣವಿಲ್ಲದೆ ಮುಂದೂಡುವ, ರದ್ದುಪಡಿಸುವ, ಮತ್ತು ಷರತ್ತುಗಳನ್ನು ಮಾರ್ಪಾಡು ಮಾಡುವ ತೀರ್ಮಾನವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಮಂಡಳಿಯ ನಿರ್ದೇಶಕರು ಹೊಂದಿರುತ್ತಾರೆ.

7. ಸದರಿ ಹರಾಜಿನಲ್ಲಿ ಬಿಡ್ ಮೊಬಲಗು ಸರ್ಕಾರಕ್ಕೆ ಲಾಭದಾಯಕವಾಗದಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಥವಾ ಮುಂದೂಡುವ ಅಧಿಕಾರವನ್ನು ನಿರ್ದೇಶಕರು ಹೊಂದಿರುತ್ತಾರೆ.

8. ಹೆಚ್1 ಬಿಡ್ ದರಕ್ಕೆ ಶೇ.18% ಜಿ.ಎಸ್.ಟಿ ಮೊತ್ತವನ್ನು ಮತ್ತು ಹೆಚ್1 ಬಿಡ್ ಮೊತ್ತ ಮತ್ತು 18% ಜಿ.ಎಸ್.ಟಿ ಮೊತ್ತ ಸೇರಿ ಒಟ್ಟು ಮೊತ್ತಕ್ಕೆ 1% ಟಿ.ಸಿ.ಎಸ್ ಮೊತ್ತ ಪಾವತಿಸಬೇಕು.

9. ಬಿಡ್‌ದಾರರು ಕಡ್ಡಾಯವಾಗಿ ಜಿ.ಎಸ್.ಟಿ ನಂಬರ್ ಹೊಂದಿರಬೇಕು.

(ಹೆಚ್.ಎನ್.ಗೋಪಾಲಕೃಷ್ಣ) 12/9/2022

ನಿರ್ದೇಶಕರು,ಪರೀಕ್ಷೆಗಳು

12/09/22